ಮಾರುಕಟ್ಟೆ ಸಮೀಕ್ಷೆ ನಡೆಸುತ್ತಿದ್ದ ಪ್ರಖ್ಯಾತ ಸೋಪು ತಯಾರಿಕಾ ಕಂಪನಿ ಪ್ರತಿನಿಧಿಯೊಬ್ಬ ಶ್ರೀಮತಿ ಕೇಸಿಗೆ ಪ್ರಶ್ನಾವಳಿ ನೀಡಿದ್ದ. ಬಟ್ಟೆಗೆ ಯಾವ ಸೋಪು ಹಚ್ಚಿದರೆ ಹೆಚ್ಚು ಕ್ಲೀನ್ ಆಗುತ್ತದೆ ಎನ್ನುವ ಪ್ರಶ್ನೆಗೆ: ಗಂಡ ಹೇಗೆ ಒಗೆಯುತ್ತಾನೆ ಎಂಬುದರ ಮೇಲೆ ಸ್ವಚ್ಛತೆ ಅವಲಂಬಿಸಿದೆ ಎಂದಳು.

***

ಖಾಸಗಿ ಕಂಪನಿಯೊಂದರ ಸಾರ್ವಜನಿಕ ಸಂಪರ್ಕಾಧಿಕಾರಿ ಹುದ್ದೆಯ ಸಂದರ್ಶನದಲ್ಲಿ ಗುಂಡನ ಪ್ರತಿಕ್ರಿಯೆ ಹೀಗಿತ್ತು

ಸಂದರ್ಶಕ: ಒಬ್ಬನ ಶವ ಸಂಸ್ಕಾರ ಸಕಲ ಮರ್ಯಾದೆಯಿಂದ ಆಗಬೇಕಾದರೆ ಆತ ಏನಾಗಿರಬೇಕು?

ಗುಂಡ: ಕನಿಷ್ಠ ಅವನು ಸತ್ತಿರಬೇಕು.

***

ಗುಂಡ: ಪಕ್ಕದ ಮನೆ ರಾಣಿಗೆ ಇಂಗ್ಲಿಷ್ ಬರುವುದೇ ಇಲ್ಲ. ಅವಳಿಗೆ ಪ್ಯಾಷನ್ ಮಾಡುವುದು ಮಾತ್ರ ಗೊತ್ತು.

ಪಾಂಡು: ಅದು ಹೇಗೆ ಹೇಳುತ್ತೀಯಾ?

ಗುಂಡ: ಆ ದಿನ ನಾನು ಅವಳಿಗೆ ಕಿಸ್ ಕೊಡು ಅಂದಿದ್ದಕ್ಕೆ ಅವಳು ನನ್ನ ಕಪಾಳಕ್ಕೆ ಬಾರಿಸಿದಳು.

***

ಹೆಂಡತಿ: ನನ್ನ ಉಂಗುರ ಕಳೆದು ಹೋಗಿದೆ. ಕಾಣಿಸುತ್ತಲೇ ಇಲ್ಲ.

ಗುಂಡ: ನಿನ್ನ ಉಂಗುರ ಕಳೆದಿಲ್ಲ ನನ್ನ ಪ್ಯಾಂಟಿನ ಜೇಬಿನಲ್ಲಿದೆ. ಆದರೆ ನನ್ನ ಜೇಬಿನಲ್ಲಿದ್ದ ನೂರು ರೂಪಾಯಿ ಆ ಜೇಬಿನಿಂದ ಕಾಣೆಯಾಗಿದೆ.

***

ಭಿಕ್ಷುಕ: ಅಮ್ಮಾ.. ನನ್ನ ಹೆಂಡತಿ ಮಕ್ಕಳ ಹತ್ತಿರ ಹೋಗಲು ಸ್ವಲ್ಪ ದುಡ್ಡು ಕೊಟ್ಟು ಸಹಾಯ ಮಾಡಿ.

ಮಹಿಳೆ: ನಿನ್ನ ಹೆಂಡತಿ ಮಕ್ಕಳು ಎಲ್ಲಿದ್ದಾರಪ್ಪಾ? ಅವರಿಗೇನಾಗಿದೆ?

ಭಿಕ್ಷುಕ: ಅವರು ಸಿನಿಮಾ ಥಿಯೇಟರಿನಲ್ಲಿದ್ದಾರೆ. ನಾನೀಗಲೇ ಅವರ ಬಳಿ ಹೋಗದಿದ್ದರೆ; ಸಿನಿಮಾ ಮುಗಿದು ಹೋಗುತ್ತದೆ.

***

ಟೀಚರ್: ಪುಟ್ಟೀ... ನೀನು ಇಂದು ಸ್ಕೂಲಿಗೆ ತಡವಾಗಿ ಬರಲು ಕಾರಣ ಏನು?

ಪುಟ್ಟಿ: ನಾನು ಬಿದ್ದಿದ್ದ ಜಾಗದಿಂದ ಎದ್ದು ಬರಲಾಗಲಿಲ್ಲ.

ಟೀಚರ್: ಎಲ್ಲಿ ಬಿದ್ದಿದ್ದೆ?

ಪುಟ್ಟಿ: ಹಾಸಿಗೆಯಲ್ಲಿ ಬಿದ್ದಿದ್ದೆ. ಬಿದ್ದ ಜಾಗದಲ್ಲೇ ನಿದ್ದೆ ಹತ್ತಿತ್ತು. ಆದ್ದರಿಂದ ಬೇಗನೇ ಎದ್ದು ಬರಲಾಗಲಿಲ್ಲ.

ಸಂಗ್ರಹ: ವೀರನಗೌಡ ಪಾಟೀಲ, ಸೋಮನಕಟ್ಟಿ



ಗಣೇಶ್

ಹೆಂಡತಿ ಬೈದಿದ್ದಕ್ಕೆ ತಿಮ್ಮ ಮುನಿಸಿಕೊಂಡಿದ್ದ. ಹೆಂಡತಿ ಪತಿಯನ್ನು ಮುದ್ದುಮಾಡುತ್ತಾ ನಾನು ತಿಳಿಯದೆ ಆಡಿದ ಮಾತನ್ನು ನೀವೇಕೆ ಹೊಟ್ಟೆಗೆ ಹಾಕ್ಕೋಬಾರದು? ಎಷ್ಟೇ ಆದರೂ ನಾನು ಹೆಚ್ಚು ಓದಿದವಳಲ್ಲ. ಕತ್ತೆ ಎನ್ನಬೇಕಿತ್ತು, ತಪ್ಪಾಗಿ ಕುದುರೆ ಅಂದೆ.

ಹಾಗೆ ಮಾಡು, ಹೀಗೆ ಮಾಡು, ಅದು ಬೇಡ, ಇದು ಸರಿ ಮಾಡು ಎಂದೆಲ್ಲ ಅಮ್ಮನಿಂದ ಪದೇ ಪದೇ ಕೇಳಿಸಿಕೊಂಡು ಪುಟ್ಟನ ತಲೆ ಚಿಟ್ಟು ಹಿಡಿದುಹೋಗಿತ್ತು. ಅಮ್ಮ ಹೀಗೆಯೇ ಅಪ್ಪನಿಗೂ ಹೇಳುವುದನ್ನು ಪುಟ್ಟ ನೋಡುತ್ತಲೇ ಬೆಳೆದಿದ್ದ. ಒಮ್ಮೆ ಆತನಿಗೆ ಸಾಕಾಗಿ ಹೋಗಿ, ಹೇಳಿಯೇ ಬಿಟ್ಟ ಥೂ ಈ ಜೀವನವೇ ಹಾಗೆ. ಸಣ್ಣವನಿದ್ದಾಗ ಅಮ್ಮನ ಮಾತು ಕೇಳಬೇಕು, ದೊಡ್ಡವನಾದ ಮೇಲೆ ಹೆಂಡತಿಯ ಮಾತು ಕೇಳಬೇಕು.

***

ನಾಲ್ಕು ಸಹಸ್ರಪದಿಗಳು ಸೇರಿ ಚೌಕಾಬಾರಾ ಆಡುತ್ತಿದ್ದವು. ಆಗ ಅವುಗಳಿಗೆ ಚಾಟ್ಸ್ ತಿನ್ನಬೇಕೆಂಬ ಮನಸ್ಸಾಯಿತು. ನಾಲ್ಕೂ ಸಹಸ್ರಪದಿಗಳಲ್ಲಿ ಅತ್ಯಂತ ಕಿರಿಯದಾಗಿದ್ದ ಹುಳುವನ್ನು ಚಾಟ್ಸ್ ತರಲು ಉಳಿದ ಹುಳುಗಳು ಕಳುಹಿಸಿದವು. ನಾಲ್ಕೈದು ತಾಸು ಕಳೆದರೂ ಅದು ಬರಲೇ ಇಲ್ಲ. ಹಸಿವಿನಿಂದ ಕಂಗೆಟ್ಟ ಉಳಿದ ಮೂರು ಹುಳುಗಳು ಮನೆಯಿಂದ ಹೊರಬಂದು ನೋಡಿದರೆ, ಕಿರಿಯ ಸಹಸ್ರಪದಿ ಅಂಗಡಿಗೆ ಹೋಗಲು ಕಾಲಿಗೆ ಒಂದೊಂದೇ ಶೂ ಹಾಕಿಕೊಳ್ಳುತ್ತಿತ್ತು!

***

ಮನೆಯಲ್ಲಿ ಶಾಂತಿ ನೆಲೆಸಬೇಕೆಂದರೆ ಎರಡು ಸೂತ್ರಗಳನ್ನು ಪಾಲಿಸಬೇಕು. ಮೊದಲನೆಯದು ಹೆಂಡತಿ ಮಾತನಾಡುವಾಗ ಸುಮ್ಮನಿದ್ದು ಬಿಡಬೇಕು. ಎರಡನೆಯದು, ಹೆಂಡತಿ ಸುಮ್ಮನಿದ್ದಾಗ ಮಾತನಾಡಲು ಹೋಗಬಾರದು.

***

ಖ್ಯಾತ ಸಾಹಿತ್ಯೊಬ್ಬರು ತೀರಿಕೊಂಡರು. ಕೆಲ ದಿನಗಳ ನಂತರ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯಕ್ರಮ ನಿಶ್ಚಯವಾಯಿತು. ಗುಂಡನಿಗೆ ಕಾರ್ಯಕ್ರಮ ನಿರೂಪಿಸುವ ಅವಕಾಶ ಒದಗಿತು. ಶ್ರದ್ಧಾಂಜಲಿ ಸಲ್ಲಿಸುವ ಸಮಯ ಬಂದಾಗ ಗುಂಡ ಮೈಕ್ ನಲ್ಲಿ ಹೀಗೆ ಅನೌನ್ಸ್ ಮಾಡಿದ "ಸಾಹಿತ್ಯ ಪ್ರೇಮಿಗಳೆ, ಈಗ ಮೌನಾಚರಣೆ. ದಯವಿಟ್ಟು ಎಲ್ಲರೂ ತಮ್ಮ ತಮ್ಮ ಮೊಬೈಲ್ ಗಳನ್ನು ಎರಡು ನಿಮಿಷದ ಮಟ್ಟಿಗೆ ಸೈಲೆಂಟ್ ಮೋಡ್ ಗೆ ಹಾಕಿ ಮೌನಾಚರಿಸಬೇಕೆಂದು ಕೋರುತ್ತೇನೆ.

***

ರಂಗ, ಶ್ರೀರಂಗ, ಬಜರಂಗ, ನವರಂಗ ಒಂದೇ ಬೈಕಿನಲ್ಲಿ ನಿತ್ಯ ಆಫೀಸಿಗೆ ತೆರಳುತ್ತಿದ್ದರು. ನಿತ್ಯ ಪೊಲೀಸ್‌ಗೆ ಸಿಕ್ಕಿ ಬೀಳುತ್ತಿದ್ದರು. ದಿನವೂ ಫೈನ್ ಹಾಕಿ ಹಾಕಿ ರೋಸಿ ಹೋದ ಟ್ರಾಫಿಕ್ ಪೊಲೀಸ್ ಒಂದು ದಿನ ನಾಲ್ವರಿಗೂ ಯಾಕೆ ಹೀಗೆ ಮಾಡುತ್ತಿದ್ದೀರೆಂದು ಕೇಳಿದ. ಅವರು ಉತ್ತರಿಸಿದರು 'ನಾಲ್ವರೂ ನಾಲ್ಕು ಬೈಕ್‌ಗಳಿಗೆ ಪೆಟ್ರೋಲ್ ಹಾಕಿ ಪ್ರಯಾಣಿಸುವುದಕ್ಕಿಂತ ನಾಲ್ವರೂ ಒಂದೇ ಬೈಕಿನಲ್ಲಿ ಪ್ರಯಾಣಿಸಿ ನಿಮಗೆ ನಿತ್ಯವೂ ಫೈನ್ ಕಟ್ಟಿ ಖರ್ಚು ಕಡಿಮೆ ಮಾಡೋಣ ಅಂತ ಸಾರ್'.

ಸಂಗ್ರಹ: ಸುಘೋಷ ಸ. ನಿಗಳೆ

ಈ ಲಾಕ್‌ಡೌನ್, ಎಷ್ಟು ಬೇಕಾದ್ರೂ ಲಿಕ್ಕರ್ ಸಿಗುತ್ತೆ, ಆದ್ರೆ ಅರ್ಜೆಂಟ್ ಆಗಿ ಒಂದು ನಿಕ್ಕರ್ ಬೇಕು ಅಂದ್ರು ಸಿಗಲ್ಲ...

***

ಮದುವೆಗೆ ಅವಕಾಶ ಇದೆ ಅಂತೆ.... ಆದ್ರೆ, ಬಟ್ಟೆ ಅಂಗಡಿ, ಆಭರಣ ಅಂಗಡಿ, ಫ್ಯಾನ್ಸಿ ಅಂಗಡಿ ಎಲ್ಲವೂ ಬಂದ್... ಹಾಗಾದರೆ ಮದುಮಕ್ಕಳು ಬರ್ಮುಡಾ ಮತ್ತು ನೈಟಿಯಲ್ಲಿ ಮದುವೆ ಮಾಡಿಕೊಳ್ಳುವುದೇ...

***

ಎಣ್ಣೆ, ಬಾರ್, ರೆಸ್ಟೋರೆಂಟ್ ಬಂದ್ ಹೆಂಡತಿ ಖುಷ್. ಬೆಳ್ಳಿ, ಬಂಗಾರ, ಸೀರೆ ಅಂಗಡಿ ಬಂದ್ ಗಂಡ ಖುಷ್. ಸ್ಕೂಲ್, ಕಾಲೇಜ್ ಬಂದ್ ಮಕ್ಕಳು ಖುಷ್. ಒಟ್ಟಲ್ಲಿ ಸುಖ ಸಂಸಾರಕ್ಕೆ ಇನ್ನೂ ಏನು ಬೇಕು?

***

ಸದ್ಯಕ್ಕೆ ಈಗ ಇರೋದು ಎರಡೇ ಕಾಲಗಳು ಒಳಗಡೆ ಇದ್ರೆ ಉಳಿಗಾಲ, ಹೊರಗಡೆ ಬಂದ್ರೆ 'ಕೊನೆಗಾಲ'

***

ಪ್ರೇಮಿಗಳು ಒಟ್ಟಿಗೆ ಇರೋ ದಿನ 'ವ್ಯಾಲೆಂಟೈನ್' ಡೇ.

ಮನೆ ಮಂದಿಯೆಲ್ಲಾ ಒಟ್ಟಿಗೆ ಇರೋ ದಿನ 'ಕ್ವಾರಂಟೈನ್' ಡೇ.

***

ಅಂದು ಯುದ್ಧ ಮಾಡಿ ದೇಶವನ್ನು ಉಳಿಸಬೇಕಿತ್ತು. ಆದ್ರೆ ಈ ಇಂದು ನಿದ್ದೆ ಮಾಡಿ ದೇಶವನ್ನು ಉಳಿಸುವ ಪರಿಸ್ಥಿತಿ ಬಂದಿದೆ.

ಸಂಗ್ರಹ: ವಾಟ್ಸ್ ಆ್ಯಪ್